ಓ.ಎಸ್. ನಂ. 255 /2016
ಪಿ ಡಬ್ಲ್ಯೂ -1

**ಸಾಕ್ಷಿಯನ್ನು ದಿನಾಂಕ: 17-03-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಶ್ರೀ ಎಸ್ ಕೆ ಎಂ ವಕೀಲರಿಂದ**

1. ದಾವಾ ಆಸ್ತಿಗೆ ಸಂಬಂಧಿಸಿದಂತೆ ನಾನು 2009 ನೇ ಸಾಲಿನ ಪಹಣಿ ಪತ್ರಿಕೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಪಹಣಿ ಪತ್ರಿಕೆಯಲ್ಲಿ ಎಷ್ಟು ವಿಸ್ತೀರ್ಣ ಕಾಣಿಸಿರುತ್ತಾರೆಂದು ನನ್ನಿಂದ ಹೇಳಲಾಗುವುದಿಲ್ಲ. ಪ್ರತಿವಾದಿ ಹೆಂಡತಿ ನನ್ನ ತಂಗಿ. ನಾನು ಮತ್ತು ಪ್ರತಿವಾದಿ ಹೆಂಡತಿ ಸುಮಾರು 50 ರಿಂದ 60 ವರ್ಷಗಳ ಕಾಲ ಜೊತೆಯಲ್ಲಿ ಇದ್ದೆವು. ಪ್ರತಿವಾದಿ ಕುಟುಂಬದ ವ್ಯವಹಾರದ ಬಗ್ಗೆ ನನಗೆ ಅಷ್ಟಾಗಿ ಗೊತ್ತಿರುವುದಿಲ್ಲ. ನಾನು ಕ್ರಯದ ಕರಾರು ಪತ್ರ ಬರೆದುಕೊಟ್ಟ ದಿನಾಂಕ ಕ್ರಯಪತ್ರ ಬರೆಸಿಕೊಳ್ಳಲು ನನಗೆ ಅವಕಾಶ ಇತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ದಾವಾ ಆಸ್ತಿಗೆ ಹೊಂದಿಕೊಂಡತೆ ವಾಸದ ಮನೆಗಳು ಇವೆ ಎಂದರೆ ಸರಿ. ದಾವಾ ಆಸ್ತಿಯ ಪಕ್ಕದಲ್ಲಿರುವ 30 x 40 ಅಡಿ ನಿವೇಶನದ ಬೆಲೆ 5 ರಿಂದ 10 ಲಕ್ಷ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ 20 ನಿವೇಶನಗಳು ಆಗುತ್ತವೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಬೆಲೆ 1 ಕೋಟಿ ರೂ ಬಾಳುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ಜೊತೆ ನಾನು ಇದ್ದುಕೊಂಡು ಅವರಿಗೆ ಮೋಸ ಮಾಡುವ ಸಲುವಾಗಿ ಕರಾರು ಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ಕರಾರು ಪತ್ರಕ್ಕೆ ಸಹಿ ಮಾಡಿರುವವರು ಸಾಕ್ಷಿದಾರರ ಪರಿಚಯ ನನಗೆ ಇರುತ್ತದೆ. ಆ ಕಾರಣ ನನಗೆ ಅನುಕೂಲ ಮಾಡಲು ಕರಾರು ಪತ್ರಕ್ಕೆ ಸಹಿಗಳನ್ನು ಮಾಡಿರುತ್ತಾರೆಂದರೆ ಸರಿಯಲ್ಲ. ಛಾಪಾ ಕಾಗದವನ್ನು ಶಾಂತಮ್ಮರವರ ಹೆಸರಿಗೆ ನಾವಿಬ್ಬರು ಸೇರಿ ತಂದಿರುತ್ತೇವೆ. ಕರಾರು ಪತ್ರದಲ್ಲಿ ಶಾಂತಮ್ಮರವರು ಪಕ್ಷಗಾರರು ಅಲ್ಲ ಎಂದರೆ ಸರಿ. ಕರಾರು ಪತ್ರವನ್ನು ನಾನು ಸೃಷ್ಟಿ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**